O.S. ನಂಬರಃ 30/2019

ಪಿ. ಡಬ್ಲ್ಯೂಃ 1

ದಿಃ 30-06-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಓ ಎನ್ ವಕೀಲರಿಂದಃ

ಸರ್ವೆ ನಂ.357/ಬ 2 ರಲ್ಲಿ 3 ಮನೆಗಳಿದ್ದು, ಅದರಲ್ಲಿ 2 ಬಾಡಿಗೆಗೆ ನೀಡಿದ್ದು, ಒಂದರಲ್ಲಿ ನಾನು ಇದ್ದೇನೆ. ನಾನು ವಾಸಿಸುತ್ತಿದ್ದ ಕಟ್ಟಡ ಪ್ರತ್ಯೇಕವಿದೆ ಎಂದರೆ ಸರಿ. ಬಾಡಿಗೆಗೆ ನೀಡಿದ ಕಟ್ಟಡದಲ್ಲಿ ಇಬ್ಬರು ವಾಸ್ತವ್ಯಕ್ಕಿದ್ದು, ಒಬ್ಬರು ಅಂಗಡಿ ನಡೆಸುತ್ತಾರೆ ಎಂದರೆ ಸರಿ. ಸದರಿ ಬಾಡಿಗೆಗೆ ನೀಡಿದ ಕಟ್ಟಡದಿಂದ ಪ್ರತಿ ತಿಂಗಳು 13 ಸಾವಿರ ಬಾಡಿಗೆ ಪಡೆಯುತ್ತೇನೆ. ಸದರಿ ಬಾಡಿಗೆ ಹಣವನ್ನು ಮೊದಲು ನನ್ನ ತಾಯಿ ಪಡೆಯುತ್ತಿದ್ದಳು ಎಂದರೆ ಸರಿಯಲ್ಲ. ಸದರಿ ಸಂಗತಿಯನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಾಡಿಗೆಗೆ ನೀಡಿದ ಕಟ್ಟಡ ನಾನೇ ಕಟ್ಟಿಸಿದ್ದೇನೆ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಕುಟುಂಬದ ಹಣದಿಂದ ಸದರಿ ಆಸ್ತಿ ಖರೀದಿಸಿದ್ದು, ಇಮಾರತಿಯನ್ನೂ ಸಹ ಅದೇ ಹಣದಲ್ಲಿ ಕಟ್ಟಿಸಲಾಗಿದೆ ಎಂದರೆ ಸರಿಯಲ್ಲ. ಕುಟುಂಬಕ್ಕೆ ಸಂಬಂಧಪಟ್ಟ ಅಂಗಡಿಯ ಬಾಡಿಗೆಯಿಂದ ಸದರಿ ಜಾಗೆ ಖರೀದಿಸಿ ಇಮಾರತಿ ಮಾಡಿ ಬಾಡಿಗೆಗೆ ನೀಡಲಾಗಿದೆ ಎಂದರೆ ಸರಿಯಲ್ಲ. ಬಾಡಿಗೆಗೆ ಪಡೆದ ವ್ಯಕ್ತಿಗಳು ನೀಡಿದ 6 ಲಕ್ಷ, 2 ಲಕ್ಷ ಡೆಪಾಜಿಟ್ ಹಣವನ್ನೂ ಸಹ ಇಮಾರತಿ ನಿರ್ಮಿಸಲು ವಿನಿಯೋಗಿಸಿದೆ ಎಂದರೆ ಸರಿಯಲ್ಲ. ಕುಟುಂಬದ ಅನುಕೂಲಕ್ಕಾಗಿ ಮನೆಯನ್ನು ನನ್ನ ಹೆಸರಿನಲ್ಲಿ ಮಾಡುವ ಪ್ರಮೇಯ ಬಂದಿತ್ತು ಎಂದರೆ ಸರಿಯಲ್ಲ.

8 ನೇ ಪ್ರತಿವಾದಿ ನೀಡಿದ 6 ಲಕ್ಷ ರೂಪಾಯಿ ಡೆಪಾಜಿಟ್ ಹಣವನ್ನು ಮನೆಯ ನಿರ್ಮಾಣಕ್ಕೆ ವಿನಿಯೋಗಿಸಲಾಗಿದೆ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿ ಕಡೆಯಿಂದ

6 ಲಕ್ಷ ರುಪಾಯಿ ಡೆಪಾಜಿಟ್ ಹಣವನ್ನು ಸೆಡ್ಯುಲ್ ಬ ದಲ್ಲಿ ವಿವರಿಸಿದ ಅಂಗಡಿ ಬಾಡಿಗೆ  ನೀಡುವ ಸಮಯದಲ್ಲಿ ತಾಯಿ ಪಡೆದು, ನಾನು ಕಟ್ಟಿಸಿದ ಇಮಾರತಿಗೆ ನೀಡಿದ್ದಾಳೆ ಎಂದರೆ ಸರಿಯಲ್ಲ.  ಪ್ರತಿವಾದಿ 7 ಮತ್ತು 8 ಡೆಪಾಜಿಟ್ ಹಣ ನೀಡಿದ ಬಗ್ಗೆ ದಾವೆ ಬರೆಸುವ ಸಮಯದಲ್ಲಿ ವಕೀಲರಿಗೆ  ಮಾಹಿತಿ ತಿಳಿಸಿದ್ದೇನೆ, ಅದರ ಬಾಂಡ್ 3 ಮತ್ತು 6 ನೇ ಪ್ರತಿವಾದಿಯರ  ಬಳಿ ಇದೆ ಎಂದು ಹೇಳುತ್ತಾರೆ.  ಬ ಸೆಡ್ಯೂಲ್ ನಲ್ಲಿ ವಿವರಿಸಿದ ಬಾಡಿಗೆ ನೀಡಿದ ಆಸ್ತಿಗಳ ಪೈಕಿ 9 ನೇ  ಪ್ರತಿವಾದಿಗೆ ನೀಡಿದ ಪ್ರತಿ ದಿನ ಬಾಡಿಗೆ ಹಣ ರೂ.100/-ನ್ನು ನಾನು ಪಡೆಯುತ್ತಿದ್ದೇನೆ.  2008 ರಿಂದ 60 ರುಪಾಯಿ, 70 ರುಪಾಯಿ ಬಾಡಿಗೆ ಪಡೆದಿದ್ದು, ನಂತರ ಮೂರು ವರ್ಷಗಳಿಂದ ಪ್ರತಿ ದಿನ 100/- ರೂಪಾಯಿ ಪಡೆಯುತ್ತಿದ್ದೇನೆ. ಸದರಿ ಅಂಗಡಿಗೆ 2008 ರಲ್ಲಿ  ರೂ.40,000/- ಡೆಪಾಜಿಟ್ ನೀಡಿದ್ದಾರೆ.  ಸದರಿ ಬಾಡಿಗೆ ಹಣ ಹಾಗೂ ನನ್ನ ಹೆಸರಿನಲ್ಲಿರುವ ಆಸ್ತಿಗಳಲ್ಲಿಯ ಬಾಡಿಗೆ ಹಣದ ಕುರಿತು ಪ್ರತ್ ಪ್ರತ್ಯೇಕವಾಗಿ ಲೆಕ್ಕಪತ್ರ ಇಟ್ಟಿಲ್ಲ.

ನನ್ನ ತಾಯಿಗೆ ವೈದ್ಯಕೀಯ ಹಾಗೂ ಇರತ ಖರ್ಚಿಗೆ ಹಣ ಬೇಕಾದಾಗ ಬಾಡಿಗೆ ಹಣದಲ್ಲಿ ನೀಡುತ್ತಿದ್ದೀರಿ ಎಂದರೆ ಸಾಕ್ಷಿ ನಾನು ದುಡಿದ ಹಣದಲ್ಲಿ ನೀಡುತ್ತಿದ್ದೆ ಎಂದು ಹೇಳುತ್ತಾರೆ.  ಆದಾಯ ತೆರಿಗೆ ಪಾವತಿಸುವ ಸಮಯದಲ್ಲಿ ಬಾಡಿಗೆ ಹಣದ ಕುರಿತು ಮಾಹಿತಿ ನೀಡಿದ್ದೇನೆ.  ಬಾಡಿಗೆ ಹಣ ನೀಡುತ್ತಿದ್ದ ಬಗ್ಗೆ  ಬಾಯಿ ಮಾತಿನ ಸಾಕ್ಷಿ ಬಿಟ್ಟರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.  ಪ್ರತಿ ದಿವಸ ರೂ.200/-ರಂತೆ 7 ನೇ ಪ್ರತಿವಾದಿಯಿಂದ ಬಾಡಿಗೆ ಬರುತ್ತದೆ ಎಂದರೆ ಸರಿಯಲ್ಲ.  9 ನೇ ಪ್ರತಿವಾದಿ ಹೊರತುಪಡಿಸಿ ಉಳಿದ ಬಾಡಿಗೆಗೆ ನೀಡಿದ  ಅಂಗಡಿಗಳು ನನ್ನ ಕಬ್ಜೆಯಲ್ಲಿಲ್ಲ.  ಸರ್ವೆ ನಂ.357/ಬ 2 ರಲ್ಲಿ ಬಾಡಿಗೆಗೆ ನೀಡಿದ ಅಂಗಡಿಗಳು ಮತ್ತು ಮನೆಗಳು ಹಾಗೂ ದಾವಾ ಬ ಸೆಡ್ಯೂಲ್ ನಲ್ಲಿ ವಿವರಿಸಿದ ಅಂಗಡಿಗಳು ಮತ್ತು ಅವುಗಳ ಬಾಡಿಗೆ ಹಣವನ್ನು ಯಾವತ್ತೂ ವಯಕ್ತಿಕ ಸಂಪಾದನೆ ಎಂದು ಪರಿಗಣಿಸದೇ ಇರುವುದರಿಂದ ಅವುಗಳನ್ನು ಆದಾಯ  ತೆರಿಗೆ ಸಲ್ಲಿಸುವ ಸಮಯದಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ.    ಸದರಿ ವಿಷಯ

ಗೊತ್ತಾಗುತ್ತದೆಂದು ಆದಾಯ ತೆರಿಗೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ವಾದಪತ್ರದಲ್ಲಿ ಹಾಗೂ ಪ್ರತಿವಾದ ಪತ್ರದಲ್ಲಿ ತೋರಿಸಿದ ಆಸ್ತಿಗಳೆಲ್ಲವೂ ಕುಟುಂಬದ ಆಸ್ತಿಗಳಾಗಿರುತ್ತವೆ, ಅವುಗಳಲ್ಲಿ ನನಗೆ ಮತ್ತು ಕುಟುಂಬದ ಸದಸ್ಯರಾದ ಪ್ರತಿವಾದಿಯರಿಗೆ ಸಮಾನ ಹಕ್ಕುಗಳಿರುತ್ತವೆ ಎಂದರೆ ಸರಿಯಲ್ಲ. ನನ್ನ ಕುಟುಂಬದ ಸದಸ್ಯರಿಗೆ ಸಮಾನ ಹಕ್ಕು ಕೊಡುವುದನ್ನು ತಪ್ಪಿಸಲು ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.